**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.343/2019**

**(ಚಾ.ಸಾ.21/ಪ್ರಾ.ಸಾ.12)**

ತಾಃ 09.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಎಸ್ ನಾಗಭೂಷನ್ |
| ತಂದೆಯ ಹೆಸರು | ಲೇಟ್ ಶಾಮಣ್ಣ |
| ವಯಸ್ಸು | 59 ವರ್ಷ |
| ಉದ್ಯೋಗ | ಸಹಾಯಕ ಅಭಿಯಂತರರು, ಪಿಡಬ್ಲ್ಯೂ ಡಿ |
| ವಾಸ ಸ್ಥಳ | ಮಾಗಡಿ ರೋಡ, ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2015 ರಿಂದ 2025 ರವರೆಗೆ ಸಹಾಯಕ ಅಭಿಯಂತರರಾಗಿ ಲೋಕೋಪಯೋಗಿ ಇಲಾಖೆ ದಕ್ಷಿಣ ಉಪವಿಭಾಗ, ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ28.09.2018 ರಂದು ಕಗ್ಗಲಿಪುರ ಪೊಲೀಸರು ಮೊಕದ್ದಮೆ ಸಂಖ್ಯೆ 292/2018 ಕ್ಕೆ ಸಂಬಂಧಿಸಿದಂತೆ ಕಚ್ಚಾ ನಕಾಶೆ ತಯಾರಿಸಲು ಮನವಿ ಸಲ್ಲಿಸಿದ್ದು ಆ ಪ್ರಕಾರ ನಾನು ದಿಃ30.05.2019 ರಂದು ಕಗ್ಗಲಿಪುರ ಪೊಲೀಸ್ ಠಾಣೆಯ ಸಿಬ್ಬಂಧಿ ಲಿಂಗರಾಜು ಮುಳಗುಂದ ರವರೊಡನೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅವರು ತೋರಿಸಿದ ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿರುತ್ತೇನೆ. ಅದೇ ದಿನ ಸದರಿ ನಕಾಶೆಯನ್ನು

ಮೇಲಾಧಿಕಾರಿಗಳ ಮೂಲಕ ಪೊಲೀಸರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಸದರಿ ಕಚ್ಚಾ ನಕಾಶೆಯನ್ನು ನಿ.ಪಿ.17 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ ಎಸ್ ಆರ್ ವಕೀಲರಿಂದಃ**

2. ಪೊಲೀಸರು ಸಲ್ಲಿಸಿದ ಮನವಿಯನ್ನು ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ದಿಃ29.09.2018 ರಂದು ಆ ಮನವಿಯನ್ನು ನಮ್ಮ ಕಛೇರಿಯವರು ಸ್ವೀಕರಿಸಿದ್ದು ದಿಃ02.10.2018 ರಂದು ನಾನು ಪಡೆದುಕೊಂಡಿರುತ್ತೇನೆ. ನಾನು ಪೊಲೀಸರಿಂದ ಯಾವುದೇ ಮನವಿಯನ್ನು ಪಡೆದುಕೊಂಡಿಲ್ಲ ಎಂದರೆ ಸುಳ್ಳು. ನಿ.ಪಿ.17 ರಲ್ಲಿ ನಕಾಶೆಯನ್ನು ತಯಾರು ಮಾಡಿದ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿ. ಯಾವ ದಿನದಂದು ನಕಾಶೆ ತಯಾರು ಮಾಡಿದ್ದೇನೆ ಮತ್ತು ಯಾವ ದಿನಾಂಕದಂದು ಪೊಲೀಸರಿಗೆ ಕೊಟ್ಟಿದ್ದೇನೆ ಎಂದು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ನಿ.ಪಿ.17 ಅನ್ನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸುಳ್ಳು. ಪೊಲೀಸರ ಕೋರಿಕೆಯ ಮೇರೆಗೆ ನನ್ನ ಕಛೇರಿಯಲ್ಲಿ ಆ ನಕಾಶೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.17 ರಲ್ಲಿ ಹಳ್ಳಿ ರಸ್ತೆ ಎಂದು ಬರೆದಿದ್ದು ಅದು ಯಾವ ಊರಿಗೆ ಹೋಗುತ್ತದೆ ಎಂದು ಬರೆದಿಲ್ಲ ಎಂದರೆ ಸರಿ. ಪೂರ್ವ ದಿಕ್ಕಿಗೆ ಏನು ಬರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಅದು ಅರಣ್ಯ ಪ್ರದೇಶ ಆಗಿರುವುದರಿಂದ ಬರೆದಿರುವುದಿಲ್ಲ. ವಿದ್ಯುತ್ ಕಂಬಗಳು ಇರುವ ರಸ್ತೆಯು ಯಾವ ರಸ್ತೆ ಎಂದು ಬರೆದಿಲ್ಲ ಎಂದರೆ ಸರಿ.

3. ವಿದ್ಯುತ್ ಕಂಬಗಳ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಏನು ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಒಂದು ವಿದ್ಯುತ್ ಕಂಬದಿಂದ ಮತ್ತೊಂದು ವಿದ್ಯುತ್ ಕಂಬಕ್ಕೆ ಎಷ್ಟು ಅಂತರ ಇದೆ ಎಂದು ನಮೂದು ಮಾಡಿಲ್ಲ ಎಂದರೆ ಅಲ್ಲಿ ಮುಳ್ಳಿನ ಪೊದೆಗಳು ಇದ್ದುದ್ದರಿಂದ ನಮೂದು ಮಾಡಿಲ್ಲ. ಆ ರಸ್ತೆಯು ಎಷ್ಟು ಅಡಿ ಅಗಲ ಇದೆ ಎಂದು ನಮೂದು ಮಾಡಿಲ್ಲ. ಸದರಿ ರಸ್ತೆಯು ಗಿಡಗಳು ಬೆಳೆದಿರುವ ರಸ್ತೆಯಾಗಿತ್ತು. ಅಲ್ಲಿ ಹೋಗಿ ಬರಲು ಕಷ್ಟ ಆಗುತ್ತದೆ ಎಂದರೆ ಸರಿ. ನಾನು ಸುಮಾರು 4-5 ಪ್ರಕರಣಗಳಲ್ಲಿ ಈ ರೀತಿಯ ನಕಾಶೆಗಳನ್ನು ತಯಾರಿಸಿ ಕೊಟ್ಟಿದ್ದೇನೆ. ಕೃತ್ಯ ನಡೆದ ಸ್ಥಳವನ್ನು ಪೊಲೀಸರು ತೋರಿಸಿದ್ದಾರೆ. ಆದರೆ ಅದು ಮೃತದೇಹ ಇದ್ದ ಜಾಗ ಅಥವಾ ಮೃತದೇಹ ಒಳಗಡೆ ಬಿದ್ದು ಹೋಗಿರುವ ಜಾಗ ಎಂದು ಹೇಳಲು ಆಗುವುದಿಲ್ಲ. ಪೊಲೀಸರು ತೋರಿಸಿದ ಜಾಗದಲ್ಲಿ ನಾನು ನಕಾಶೆ ತಯಾರಿಸಿದ್ದೇನೆ ಎಂದರೆ ಸರಿ. ಪೊಲೀಸರಿಗೆ ಅನುಕೂಲವಾಗುವಂತೆ ನಾನು ನಿ.ಪಿ.17 ಅನ್ನು ತಯಾರಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ನಕಾಶೆ ತಯಾರಿಸಲು ಹೋಗಲು ಲಿಖಿತವಾಗಿ ಅನುಮತಿ ನೀಡಿದ್ದಾರೆ. ಈಗ ತೋರಿಸಿದ ಪತ್ರದಲ್ಲಿ ಆ ರೀತಿ ಅನುಮತಿ ನೀಡಿಲ್ಲ ಎಂದರೆ ಸರಿ. ಆದರೆ ಮೂರು ಸ್ಟಾರ್ ಗಳನ್ನು ಹಾಕುವ ಮೂಲಕ ಅನುಮತಿ ನೀಡಿದ್ದಾರೆ. ಮೂರು ಸ್ಟಾರ್ ಗಳನ್ನು ಹಾಕಿದರೆ ಅನುಮತಿ ನೀಡಿದ್ದಾರೆ ಎನ್ನುವ ಬಗ್ಗೆ ನಮ್ಮ ಇಲಾಖೆಯಲ್ಲಿ ಪ್ರತ್ಯೇಕ ನಿಯಮಗಳು ಇಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳದಲ್ಲಿ ನಿ.ಪಿ.17 ಅನ್ನು ತಯಾರಿಸಿಲ್ಲ ಎಂದರೆ ಸುಳ್ಳು. 2 ದೊಡ್ಡ ಮರಗಳನ್ನು ಮಾತ್ರ ನಕಾಶೆಯಲ್ಲಿ ತೋರಿಸಿದ್ದು ಚಿಕ್ಕ ಗಿಡಗಳನ್ನು ತೋರಿಸಿಲ್ಲ, ಅವುಗಳು ಸುತ್ತಲೂ ಇವೆ. ಆ ಜಾಗಕ್ಕೆ ಹೋಗಲು ಕಷ್ಟ ಇದೆ.

ಎಸ್.ಸಿ.ನಂ.343/2019
ಚಾ.ಸಾ.21/ಪ್ರಾ.ಸಾ.12

**<u>ಮರುವಿಚಾರಣೆ:ಇಲ್ಲ.</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.